# 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ

**31ನೇ ಡಿಸೆಂಬರ 2025ರಂದು**

**ಎಸ್. ಸಿ. ನಂ. 96/2025**

ಕರ್ನಾಟಕ ರಾಜ್ಯದ ಪರ ಖಾನಾಪೂರ ಪೋಲಿಸ ಉಪ ನಿರೀಕ್ಷಕರು.

……… ಫಿರ್ಯಾದಿದಾರರು

**- ವಿರುದ್ಧ -**

1. ರುದ್ರಪ್ಪ ಶಿವಪುತ್ರ ಹೊಸಟ್ಟಿ ಮತ್ತು ಇತರೆ.

……… ಆರೋಪಿ

**ದೋಷಾರೋಪಣೆ**

ನಾನು ಸುಭಾಷ ಸಂಕದ, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ , ಈ ಮೂಲಕ ಆರೋಪಿಯಾದ:

1. ರುದ್ರಪ್ಪ ಶಿವಪುತ್ರ ಹೊಸಟ್ಟಿ,
   ವಯಸ್ಸುಃ 32 ವರ್ಷ, ಉದ್ಯೋಗಃ ಚಾಲಕ,
   ಸಾಃ ಪುರವಂತರ ಗಲ್ಲಿ, ಬೀಡಿ , ತಾಃ ಖಾನಾಪೂರ, ಜಿಃ ಬೆಳಗಾವಿ.

2. ಶೈಲಾ ಶಿವನಗೌಡ ಪಾಟೀಲ,
   ವಯಸ್ಸುಃ 38 ವರ್ಷ, ಉದ್ಯೋಗಃ ಮನೆಕೆಲಸ,
   ಸಾಃ ಲಕ್ಷ್ಮೀ ಗಲ್ಲಿ, ಬಲೋಗಾ, ತಾಃ ಖಾನಾಪೂರ, ಜಿಃ ಬೆಳಗಾವಿ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಮೊದಲನೇಯದಾಗಿ, 1ನೇ ಆರೋಪಿಯಾದ ನೀವು ಮೃತ ಶಿವನಗೌಡ ಪಾಟೀಲ ಇವರ ಮನೆಗೆ ಆಗಾಗ ಬಂದು ಹೋಗುತ್ತಿದ್ದು, ಮೃತನ ಹೆಂಡತಿಯಾದ 2ನೇ ಆರೋಪಿತಳಾದ ನಿಮ್ಮ ಮತ್ತು 1ನೇ ಆರೋಪಿ ನಿಮ್ಮಿಬ್ಬರ ನಡುವೆ ಅನೈತಿಕ ಸಂಬಂಧ ಬೆಳೆದಿದ್ದು, ನೀವಿಬ್ಬರೂ ಅನೈತಿಕ ಸಂಬಂಧ ಇಟ್ಟುಕೊಂಡ ವಿಚಾರ ಮೃತನಿಗೆ ಗೊತ್ತಾಗಿ, ಅವನು ಸಿಟ್ಟಾಗಿ, 1 ಮತ್ತು 2ನೇ ಆರೋಪಿತರಾದ ನಿಮಗೆ ಬೆದರಿಕೆ ಹಾಕುತ್ತಿದ್ದರಿಂದ, ಮೃತನು ನಿಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಿ

ಮಾಡುತ್ತಿದ್ದಾನೆ ಎಂಬ ಕಾರಣಕ್ಕೆ 1 ಮತ್ತು 2ನೇ ಆರೋಪಿತರಾದ ನೀವುಗಳು ಹೋಳಿ ಹಬ್ಬದ ಸಂದರ್ಭದಲ್ಲಿ ಖಾನಾಪೂರ ತಾಲೂಕಿನ ಬಲೋಗಾ ಗ್ರಾಮದಲ್ಲಿರುವ ಮನೆ ನಂ.52ನೇದ್ದರದಲ್ಲಿ ಮೃತನನ್ನು ಕೊಲೆ ಮಾಡಲು ಮಾತನಾಡಿಕೊಂಡು ಹಾಗೂ ದಿನಾಂಕ 31.03.2025ರಂದು 1ನೇ ಆರೋಪಿಯಾದ ನೀವು ನಿಮ್ಮ ಚಾಲಕನ ಕೆಲಸ ಬಿಟ್ಟು ಗುಲಬರ್ಗಾದಿಂದ ಬಂದು 2ನೇ ಆರೋಪಿತಳಾದ ನಿನಗೆ ಪೋನ ಮಾಡಿದಾಗ ಅವಳು ತಾನು ಗಂಡನೊಂದಿಗೆ ಇಟಗಿ ಕ್ರಾಸಗೆ ಬರುವುದಾಗಿ ಹೇಳಿದ್ದರಿಂದ, 1ನೇ ಆರೋಪಿಯಾದ ನೀವು ಅಲ್ಲಿಗೆ ಹೋಗಿ, 2ನೇ ಆರೋಪಿತಳೊಂದಿಗೆ ಕಿತ್ತೂರ ತಾಲೂಕು ಹೊಸಕಾದರವಳ್ಳಿ ಗ್ರಾಮ ಹದ್ದಿಯ ಇಟಗಿ ಕ್ರಾಸನಲ್ಲಿರುವ ಜ್ಯೋತಿಬಾ ಹೋಟೆಲ ಎದುರು ಮೃತನನ್ನು ಕೊಲೆ ಮಾಡುವ ಬಗ್ಗೆ ಮಾತನಾಡಿಕೊಂಡು ಒಳಸಂಚು ಮಾಡಿಕೊಂಡಿದ್ದು, ಕೊಲೆ ಮಾಡುವ ಸಮಾನ ಉದ್ದೇಶದಿಂದ ಕೊಲೆಗೆ ಒಳಸಂಚು ರೂಪಿಸಿದ್ದೀರೆಂದು ನಿಮ್ಮ ಮೇಲೆ ಆರೋಪವಿದ್ದು, ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 61(2)(ಎ) ಸಹವಾಚಕ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಆರೋಪಿತರಾದ ನೀವು ಮೃತನನ್ನು ಕೊಲೆ ಮಾಡುವ ಒಳಸಂಚು ರೂಪಿಸಿದರನ್ವಯ ದಿನಾಂಕ 01.04.2025ರಂದು ಬೆಳಗ್ಗೆ 1ನೇ ಆರೋಪಿಯಾದ ನೀವು ಚಾಸಾ.20 ಇವನಿಗೆ 2ನೇ ಆರೋಪಿತಳಾದ ನಿನ್ನ ಪೋನ ನಂಬರ ಕೊಟ್ಟು ಅವಳಿಂದ ಪೋನ ಮಾಡಿಸಿ , ಮೃತನಿಗೆ ಜಮೀನು ಕೆಲಸದ ಸಲುವಾಗಿ ಖಾನಾಪೂರಕ್ಕೆ ಕಳುಹಿಸಿಕೊಡಿರಿ ಅಂತಾ ಹೇಳಿಸಿ, 2ನೇ ಆರೋಪಿಯಾದ ನೀವು ಆ ವಿಷಯವನ್ನು ತನ್ನ ಅಕ್ಕನ ಮನೆಯಲ್ಲಿ ಹೇಳಿ ತನ್ನ ಗಂಡನಾದ ಮೃತನನ್ನು ಕಳುಹಿಸಿಕೊಟ್ಟು ಈ ವಿಚಾರವನ್ನು 1ನೇ ಆರೋಪಿತನಾದ ನಿನಗೆ ಮೃತನಿಗೆ ಪೋನ ಮಾಡಲು ತಿಳಿಸಿದಂತೆ ಮೃತನು ಮಧ್ಯಾಹ್ನ ಎಂ.ಕೆ.ಹುಬ್ಬಳ್ಳಿಗೆ ಹೋಗಿ ಯಾರದೋ ಪೋನದಿಂದ 1ನೇ ಆರೋಪಿಯಾದ ನಿನಗೆ ಪೋನ ಮಾಡಿ ಎಂ.ಕೆ.ಹುಬ್ಬಳ್ಳಿಗೆ ಬಂದ

ವಿಷಯ ತಿಳಿಸಿದಾಗ, 1ನೇ ಆರೋಪಿಯಾದ ನೀವು ಮೃತ ಇದ್ದಲ್ಲಿಗೆ ಹೋಗಿ ಅವನಿಗೆ ಕೊಲೆ ಮಾಡುವ ಉದ್ದೇಶದಿಂದ ಎಂ.ಕೆ.ಹುಬ್ಬಳ್ಳಿಯ NH-47 ರಸ್ತೆಯ ಸರ್ವಿಸ ರಸ್ತೆಯ ಪಕ್ಕದಲ್ಲಿರುವ ಸ್ವಸ್ತಿಕ ವೈನ ಶಾಪ ಹತ್ತಿರದಿಂದ ಮೃತನ ಮೋಟಾರ ಸೈಕಲ ನಂ.ಕೆಎ-22/ಇಕ್ಯೂ-5817ನೇದ್ದರಲ್ಲಿ ಅಪಹರಿಸಿಕೊಂಡು ಹೋಗಿರುತ್ತೀರೆಂದು ನಿಮ್ಮ ಮೇಲೆ ಆರೋಪವಿದ್ದು, ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 140(1) ಸಹವಾಚಕ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, 1ನೇ ಆರೋಪಿಯಾದ ನೀವು ಮೃತನನ್ನು ಹಿರೇಬಾಗೇವಾಡಿಯ ಪ್ರಗತಿ ವೈನಶಾಪಗೆ ಕರೆದುಕೊಂಡು ಹೋಗಿ ಅಲ್ಲಿ ಮಧ್ಯಾಹ್ನ ಮೃತನಿಗೆ ಸಾರಾಯಿ ಕುಡಿಸಿ ಅಲ್ಲಿಂದ ಬೆಳಗಾವಿ - ಬೈಲಹೊಂಗಲ ರಸ್ತೆಯ ಪಕ್ಕದಲ್ಲಿರುವ ಚಾಸಾ.21 ಇವರ ಹಿರೇಬಾಗೇವಾಡಿಯ ವಿಜಯಲಕ್ಷ್ಮೀ ಅಗ್ರೋ ಎಜೆನ್ಸಿಗೆ ಕರೆದುಕೊಂಡು ಹೋಗಿ, ADAMA, 2, 4-D Amine Salt 58% SL, HERBISIDE SL ಹಾಗೂ ADMA TAMAR, Ametryne 80% WG HERBICIDE ಹೆಸರಿನ ಕಬ್ಬಿನ ಬೆಳೆಯಲ್ಲಿ ಸಿಂಪಡಿಸುವ ಕಳೆನಾಶಕವನ್ನು ಖರೀದಿಸಿಕೊಂಡು ಅಲ್ಲಿಂದ ಮೃತನಿಗೆ ಬೆಳಗಾವಿಯ ನಿಯಾಜ ಹೋಟೆಲಗೆ ಕರೆದುಕೊಂಡು ಹೋಗಿ ಬಿರ್ಯಾನಿ ಊಟ ಮಾಡಿಸಿ, ಉಳಿದ ಅನ್ನವನ್ನು ಕಪ್ಪು ಬಣ್ಣದ ಫುಡ್ ಕಂಟೇನರನಲ್ಲಿ ಪ್ಯಾಕ ಮಾಡಿಸಿಕೊಂಡು ಅಲ್ಲಿಂದ ವಾಪಸ ಹಿರೇಬಾಗೇವಾಡಿಯ ಪ್ರಗತಿ ವೈನಶಾಪಗೆ ಕರೆದುಕೊಂಡು ಹೋಗಿ ಸಾರಾಯಿ ಪಾರ್ಸಲ ತೆಗೆದುಕೊಂಡು ಕುಕಡೊಳ್ಳಿ ಮಾರ್ಗವಾಗಿ ಖಾನಾಪೂರಕ್ಕೆ ಹೋಗೋಣ ಅಂತಾ ಹೇಳಿ ಮೋಟಾರ ಸೈಕಲ ಮೇಲೆ ಹೋಗುವಾಗ ಕುಕಡೊಳ್ಳಿಯಲ್ಲಿರುವ ಚಾಸಾ.24ರವರ ಶಿವಬಸವ ಕಿರಾಣಿ ಅಂಗಡಿಯಲ್ಲಿ ಸೆವೆನ್‌ಅಪ್ ಕೊಲ್ಡ್ರಿಂಕ್ಸ ತೆಗೆದುಕೊಂಡು ಪಾರಿಶವಾಡಗೆ ಹೋಗಿ ಬಡಸ ಗ್ರಾಮ ಹದ್ದಿಯಲ್ಲಿರುವ ನವದುರ್ಗಾ ಬಾರನಲ್ಲಿ ಬಿಯರ್ ಖರೀದಿಸಿ ಅಲ್ಲಿಯೇ ಪಕ್ಕದಲ್ಲಿ ಜಮೀನಿನಲ್ಲಿ ಕುಳಿತು, ಮೃತನಿಗೆ

ಬಿಯರ್ ಕುಡಿಸಿ, 2 ಬಿಯರ್ ಬಾಟಲಿಗಳನ್ನು ಪಾರ್ಸಲ ತೆಗೆದುಕೊಂಡು, ಮೃತನಿಗೆ ಅಮಲಾಪುರ ಗ್ರಾಮ ಹದ್ದಿಯಲ್ಲಿರುವ ಕೆರೆಗೆ ಕರೆದುಕೊಂಡು ಹೋಗಿ, ಕೆರೆಯ ದಂಡೆ ಮೇಲೆ ಕುಳಿತು, ಖರೀದಿಸಿದ ಕಳೆನಾಶಕ ದ್ರಾವಣವನ್ನು ಸೆವೆನ್‌ಅಪ್‌ದಲ್ಲಿ ಹಾಕಿ ಅದನ್ನು ಸಾರಾಯಿಯಲ್ಲಿ ಸೇರಿಸಿ, ಮಿಕ್ಸ ಮಾಡಿ ಮೃತನಿಗೆ ಕುಡಿಸಿದ್ದಲ್ಲದೆ, ಅವನಿಗೆ ಮೋಟಾರ ಸೈಕಲ ಮೇಲೆ ಹತ್ತಿಸಿಕೊಂಡು ಗಾಡಿಕೊಪ್ಪ ಗ್ರಾಮ ಹದ್ದಿಯ ಜಮೀನು ಸರ್ವೆ ನಂ.34ನೇದ್ದರಲ್ಲಿ ಕರೆದುಕೊಂಡು ಹೋದಾಗ, ಮೃತನು ನಶೆಯಲ್ಲಿ ಮಲಗಿದಾಗ ರಾತ್ರಿ 08.00 ಗಂಟೆಗೆ ದೊಡ್ಡ ಗಾತ್ರದ ಬೆಣಚು ಕಲ್ಲನ್ನು ತೆಗೆದುಕೊಂಡು ಬಂದು ಅದನ್ನು ಅಲ್ಲಿಯೇ ಬಿದ್ದಿದ್ದ ಕ್ರೀಂ ಕಲರ್ ಉದ್ದ ತೋಳಿನ ಶರ್ಟನಲ್ಲಿ ಹಿಡಿದು ಕಲ್ಲಿನಿಂದ ಮೃತನ ತಲೆಗೆ ಜೋರಾಗಿ ಹೊಡೆದು ಕೊಲೆ ಮಾಡಿದ್ದು, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮೃತನನ್ನು ಕೊಲೆ ಮಾಡಿರುತ್ತೀರಿ ಎಂದು, ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 103(1) ಸಹವಾಚಕ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಆರೋಪಿತರಾದ ನಿಮ್ಮನ್ನು ಭಾರತೀಯ ನ್ಯಾಯ ಸಂಹಿತೆ ಕಲಂ 61(2)(ಎ), 140(1) ಹಾಗೂ 103(1) ಸಹವಾಚಕ 3(5)ರಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ವಿಚಾರಣೆಗೊಳಪಡಿಸಬೇಕೆಂದು ಈ ಮೂಲಕ ಆದೇಶಿಸುತ್ತಿದ್ದೇನೆ.

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ,
ಬೆಳಗಾವಿ.

**<u>1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ</u>**

**31ನೇ ಡಿಸೆಂಬರ 2025ರಂದು**

**<u>ಎಸ್. ಸಿ. ನಂ. 96/2025</u>**

ಕರ್ನಾಟಕ ರಾಜ್ಯದ ಪರ ಖಾನಾಪುರ ಪೋಲಿಸ ಉಪ ನಿರೀಕ್ಷಕರು.

......... ಫಿರ್ಯಾದಿದಾರರು

- ವಿರುದ್ಧ -

1. ರುದ್ರಪ್ಪ ಶಿವಪುತ್ರ ಹೊಸಟ್ಟಿ

......... ಆರೋಪಿ

**<u>ಆರೋಪಿಯ ಹೇಳಿಕೆ</u>**

1. ನಿಮಗೆ ಓದಿ ಹೇಳಿದ ಆಪಾದನೆಯನ್ನು ನೀವು ಅರ್ಥ ಮಾಡಿ ತಿಳಿದುಕೊಂಡಿದ್ದೀರಾ?

ಉತ್ತರಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರಕರಣವನ್ನು ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ

(ಆಪಾದನೆಯನ್ನು ಆರೋಪಿಗೆ ಆತನಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು ಆತನು ಕೊಟ್ಟಂತಹ ಉತ್ತರವನ್ನು ಅದೇ ರೀತಿ ನಮೂದು ಮಾಡಿಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ).

ಆರೋಪಿತನ ಸಹಿ

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ,
ಬೆಳಗಾವಿ.

**<u>1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ</u>**

**31ನೇ ಡಿಸೆಂಬರ 2025ರಂದು**

**<u>ಎಸ್. ಸಿ. ನಂ. 96/2025</u>**

ಕರ್ನಾಟಕ ರಾಜ್ಯದ ಪರ ಖಾನಾಪುರ ಪೋಲಿಸ ಉಪ ನಿರೀಕ್ಷಕರು.

……… ಫಿರ್ಯಾದಿದಾರರು

- ವಿರುದ್ಧ -

1. ಶೈಲಾ ಶಿವನಗೌಡ ಪಾಟೀಲ

……… ಆರೋಪಿ

**<u>ಆರೋಪಿಯ ಹೇಳಿಕೆ</u>**

1. ನಿಮಗೆ ಓದಿ ಹೇಳಿದ ಆಪಾದನೆಯನ್ನು ನೀವು ಅರ್ಥ ಮಾಡಿ ತಿಳಿದುಕೊಂಡಿದ್ದೀರಾ?

ಉತ್ತರಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರಕರಣವನ್ನು ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ

(ಆಪಾದನೆಯನ್ನು ಆರೋಪಿಗೆ ಆಕೆಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು ಆತನು ಕೊಟ್ಟಂತಹ ಉತ್ತರವನ್ನು ಅದೇ ರೀತಿ ನಮೂದು ಮಾಡಿಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ).

ಆರೋಪಿತಳ ಸಹಿ

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ,
ಬೆಳಗಾವಿ.